ದಿನಾಂಕ : 06.07.2022 ಓ.ಎಸ್ ನಂ.37/2014 ರಲ್ಲಿ
ಪಿ.ಡಬ್ಲ್ಯೂ-1(ಮುಜಶೀಂ ಪಾಷಾ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1, 4 ಮತ್ತು 5ನೇ ಪ್ರತಿವಾದಿಗಳ ಪರ ಶ್ರೀ ಹೆಚ್.ವಿ.ಎಸ್ ವಕೀಲರಿಂದಃ

ಈ ದಾವೆಯಲ್ಲಿ ನಾನು 4 ಸ್ವತ್ತುಗಳನ್ನು ಕಾಣಿಸಿದ್ದೇನೆ ಎನ್ನುವುದು ನಿಜ. 4 ಸ್ವತ್ತುಗಳು ಬೇರೆ ಬೇರೆ ಕಡೆ ಇವೆ ಎಂದರೆ ಸಾಕ್ಷಿಯು 3 ಸ್ವತ್ತುಗಳು ಒಂದು ಕಡಯಿದ್ದು, ಒಂದು ಸ್ವತ್ತು ಬೇರೆ ಕಡೆಯಿದೆ ಎಂದು ನುಡಿಯುತ್ತಾರೆ. 3 ಸ್ವತ್ತುಗಳು ಬಾಲಗೇರಿ ಮುಖ್ಯ ರಸ್ತೆ, ನಾಲಬಂದವಾಡಿಯಲ್ಲಿ ಹಾಗೂ ಒಂದು ಸ್ವತ್ತು ಹಾಜಿನಗರ, 2ನೇ ಅಡ್ಡರಸ್ತೆಯಲ್ಲಿರುತ್ತದೆ. ನನ್ನ ತಂದೆಯ ಹೆಸರು ಮಂತಕೀಮ್ ಪಾಷ ಉರುಫ್ ಮಹಮ್ಮದ್ ಉಮರ್ ಎನ್ನುವುದು ನಿಜ. 1ನೇ ಪ್ರತಿವಾದಿ ನನ್ನ ತಾಯಿ ಎನ್ನುವುದು ನಿಜ. ಅವರ ಹೆಸರು ಶೆಹನಾಜ್ ಉನ್ನಿಸ್ಸಾ ಎನ್ನುವುದು ನಿಜ. ನನ್ನ ತಂದೆ ದಿನಾಂಕ 05.05.2011 ರಲ್ಲಿ ಪೌತಿಯಾಗಿದ್ದಾರೆ ಎನ್ನುವುದು ನಿಜ. ದಾವಾ ಅನುಸೂಚಿಯ 1 ಮತ್ತು 2 ನೇ ಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಎನ್ನುವುದು ನಿಜ. ದಾವಾ ಅನುಸೂಚಿಯ 1ನೇ ಸ್ವತ್ತನ್ನು ದಿನಾಂಕ 05.10.1987 ರಲ್ಲಿ ನನ್ನ ತಂದೆ ಲೇಟ್ ಸಾಬಾನ್ ಸಾಬ್ ರವರ ಮಗ ಮೆಹಬೂಬ್ ಷರೀಪ್ ರವರಿಂದ ಖರೀದಿಸಿದ್ದರು ಎನ್ನುವುದು ನಿಜ. ದಾವಾ ಅನುಸೂಚಿಯ 2ನೇ ಸ್ವತ್ತು ದಿನಾಂಕ 25.03.2003 ರಂದು ನನ್ನ ತಾಯಿ ಅಂದರೆ ಈ ದಾವೆಯ 1ನೇ ಪ್ರತಿವಾದಿಯಿಂದ, ನನ್ನ ತಂದೆಗೆ ದಾನಪತ್ರದ ಮೂಲಕ ಬಂದಿದೆ ಎನ್ನುವುದು ನಿಜ. ಮೇಲೆ ಹೇಳಿದ ಕ್ರಯಪತ್ರ ಹಾಗೂ ದಾನಪತ್ರದ ಮೂಲಕ ಪಡೆದುಕೊಂಡಂತಹ ಸ್ವತ್ತುಗಳಲ್ಲಿ ನನ್ನ ತಂದೆ, ತಾಯಿ ಹಾಗೂ ನಾವುಗಳು ಸ್ವಾಧೀನದಲ್ಲಿದ್ದು ಅನುಭವಿಸುತ್ತಾ ಬಂದಿದ್ದೇವೆ ಎನ್ನುವುದು ನಿಜ. ದಾವಾ ಅನುಸೂಚಿಯ

ದಿನಾಂಕ : 06.07.2022 ಓ.ಎಸ್ ನಂ.37/2014 ರಲ್ಲಿ

ಪಿ.ಡಬ್ಲ್ಯೂ-1(ಮುಜಶೀಂ ಪಾಷಾ)

3 ಮತ್ತು 4 ನೇ ಸ್ವತ್ತುಗಳು ನನ್ನ ತಾಯಿಯ ಹೆಸರಿನಲ್ಲಿರುವ ಸ್ವತ್ತುಗಳು ಎನ್ನುವುದು ನಿಜ. ಸದರಿ ಸ್ವತ್ತುಗಳು ನಿಮ್ಮ ತಾಯಿಯ ಸ್ವಯಾರ್ಜಿತ ಸ್ವತ್ತುಗಳು? ಎಂದರೆ ಸಾಕ್ಷಿಯು ಸದರಿ ಸ್ವತ್ತುಗಳನ್ನು ನನ್ನ ತಂದೆ ಖರೀದಿಸಿ, ಆ ನಂತರ ನನ್ನ ತಾಯಿಯ ಹೆಸರಿಗೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿಯ 3 ಮತ್ತು 4 ನೇ ಸ್ವತ್ತುಗಳಿಗೆ ನನ್ನ ತಾಯಿ ಸಂಪೂರ್ಣ ಮಾಲೀಕರು ಎನ್ನುವುದು ನಿಜ. ನನ್ನ ತಾಯಿ ಅಂದರೆ 1 ನೇ ಪ್ರತಿವಾದಿ ಜೀವಂತವಿದ್ದು ಈ ದಾವೆಯಲ್ಲಿ ತಕರಾರು ಸಲ್ಲಿಸಿದ್ದಾರೆ ಎನ್ನುವುದು ನಿಜ. ನನ್ನ ತಾಯಿ ಜೀವಂತವಿರುವ ಕಾರಣ ಹಾಗೂ ದಾವಾ ಅನುಸೂಚಿಯ 3 ಮತ್ತು 4 ನೇ ಸ್ವತ್ತುಗಳು ಆಕೆಯ ಸಂಪೂರ್ಣ ಮಾಲೀಕತ್ವದ ಸ್ವತ್ತುಗಳಾದ ಕಾರಣ ಆಕೆಯ ಜೀವಿತ ಕಾಲದಲ್ಲಿ ಸದರಿ ಸ್ವತ್ತುಗಳಲ್ಲಿ ಭಾಗ ಕೇಳಲು ನನಗೆ ಹಕ್ಕಿಲ್ಲ ಎನ್ನುವುದು ಸರಿಯಲ್ಲ. ನನ್ನ ತಾಯಿಯ ಜೀವಿತ ಕಾಲದಲ್ಲಿ ಆಕೆ ಸದರಿ ಸ್ವತ್ತುಗಳನ್ನು ತನಗೆ ಇಷ್ಟ ಬಂದವರ ಹೆಸರಿಗೆ ಪರಭಾರೆ ಮಾಡಬಹುದು ಎನ್ನುವುದು ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.